ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/193/ಪದವಿ ಶುಲ್ಕ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560 001.
ದಿನಾಂಕ: 03.05.2023.

## ಸುತ್ತೋಲೆ

ವಿಷಯ: 2023-24 ನೇ ಸಾಲಿಗೆ ಸರ್ಕಾರಿ ಪದವಿ ಕಾಲೇಜುಗಳಲ್ಲಿನ ಪದವಿ ಕೋರ್ಸ್ ಗಳಿಗೆ ಶುಲ್ಕ ನಿಗಧಿಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 105 ಡಿಸಿಇ 2023 (ಇ), ದಿನಾಂಕ: 02.05.2023.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಟಿ 2022, ದಿನಾಂಕ : 14.07.2022.

************

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2023-24 ನೇ ಶೈಕ್ಷಣಿಕ ಸಾಲಿಗೆ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳು, ಕಾನೂನು ಕಾಲೇಜುಗಳು, ಚಿತ್ರಕಲಾ ಕಾಲೇಜುಗಳಲ್ಲಿನ ಪದವಿ ಕೋರ್ಸ್‌ಗಳಿಗೆ ಶುಲ್ಕವನ್ನು ಪರಿಷ್ಕರಿಸುವ ಸಂಬಂಧ 2022-23 ನೇ ಸಾಲಿನಲ್ಲಿ ನಿಗಧಿಗೊಳಿಸಿದ ಶುಲ್ಕವನ್ನೇ 2023-24 ನೇ ಸಾಲಿಗೂ ಮುಂದುವರೆಸಲು ಉಲ್ಲೇಖ (1) ರ ಆದೇಶದಲ್ಲಿ ಅನುಮತಿ ನೀಡಲಾಗಿದೆ. ಆದ್ದರಿಂದ, ಉಲ್ಲೇಖ (1) ಮತ್ತು (2)ರ ಆದೇಶಗಳನ್ವಯ ಈ ಕೆಳಕಂಡಂತೆ ಶುಲ್ಕಗಳನ್ನು 2023-24 ನೇ ಸಾಲಿಗೆ ವಸೂಲಿ ಮಾಡಲು ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.

| ಕ್ರ.ಸಂ. | ಶುಲ್ಕದ ವಿವರ | ಶುಲ್ಕ (ರೂ.) |
|---|---|---|
| 01. | ಅರ್ಜಿ ಶುಲ್ಕ | ಉಚಿತ |
| 02. | ಪ್ರವೇಶ ಶುಲ್ಕ | 80.00 |
| 03. | ಬೋಧನಾ ಶುಲ್ಕ | 940.00 |
| 04. | ಪ್ರಯೋಗಾಲಯ ಶುಲ್ಕ<br>(ದಿನಾಂಕ:26.06.2007 ರ ಸಂಖ್ಯೆ: ಇಡಿ 102 ಯೋಯೋಕ 2007ರ ಆದೇಶದಲ್ಲಿ 2007-08ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ನಿಯರಿಗೆ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕವನ್ನು ಮನ್ನ ಮಾಡಲಾಗಿದೆ) | 260.00 |
| 05. | ವೈದ್ಯಕೀಯ ತಪಾಸಣಾ ಶುಲ್ಕ | 30.00 |
| 06. | ವರ್ಗಾವಣೆ ಪತ್ರ ಶುಲ್ಕ | 40.00 |
| 07. | ವಿದ್ಯಾಭ್ಯಾಸ ಪ್ರಮಾಣ ಪತ್ರ ಶುಲ್ಕ | 20.00 |
| 08. | ಗ್ರಂಥಾಲಯ ಶುಲ್ಕ (ಬೈಂಡಿಂಗ್ ಸೇರಿ) | 100.00 |
| | ಒಟ್ಟು | **1470.00** |
| 09. | ವಾಚನಾಲಯ ಶುಲ್ಕ | 70.00 |
| 10. | ಕ್ರೀಡಾ ಶುಲ್ಕ | 100.00 |
| 11. | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 200.00 |
| 12. | ಕಾಲೇಜು ಮ್ಯಾಗ್‌ಜಿನ್ ಶುಲ್ಕ | 100.00 |
| 13. | ಪರಿಚಯ ಪುಸ್ತಕ ಶುಲ್ಕ | 50.00 |
| 14. | ಗುರುತಿನ ಚೀಟಿ | 50.00 |
| 15. | ಅ) ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ. (KSTBF)<br>ಆ) ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ. (KSSWF)<br>ಇ) ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿ. (NWTF) | 25.00<br>25.00<br>20.00 |
| 16. | ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರೋವರ್ ಮತ್ತು ರೇಂಜರ್ ಘಟಕ ಪ್ರಾರಂಭಿಸಲು ಹಾಗೂ ಘಟಕಗಳ ಚಟುವಟಿಕೆ ಶುಲ್ಕ<br>(ಸರ್ಕಾರಿ ಆದೇಶ ಸಂಖ್ಯೆ: ಇಡಿ 46 ವಿವಿಧ 2010 ದಿನಾಂಕ:23.11.2011) | 50.00 |
| 17. | ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಶುಲ್ಕ<br>(ಸರ್ಕಾರಿ ಆದೇಶ ಸಂಖ್ಯೆ: ಇಡಿ 64 ವಿವಿಧ 2011 ದಿನಾಂಕ:22.12.2011) | 50.00 |

| | | |
|---|---|---|
| 18. | ಎನ್.ಎಸ್.ಎಸ್. ಶುಲ್ಕ<br>ಅ) ಘಟಕ ಇಲ್ಲದ ಕಾಲೇಜುಗಳಲ್ಲಿ<br>ಆ) ಒಂದು ಘಟಕ ಇರುವ ಕಾಲೇಜುಗಳಲ್ಲಿ<br>(ಸರ್ಕಾರಿ ಆದೇಶ ಸಂಖ್ಯೆ:ಇಡಿ 11 ವಿವಿಧ 2015 ದಿನಾಂಕ: 04.05.2015) | 50.00<br>40.00 |
| 19. | ಕಾಲೇಜು ಅಭಿವೃದ್ಧಿ ಶುಲ್ಕ(CDF) (ಸರ್ಕಾರಿ ಕಾಲೇಜುಗಳಿಗೆ ಮಾತ್ರ) (ಸರ್ಕಾರದ ಪತ್ರಸಂಖ್ಯೆ : ಇಡಿ 71 ಡಿಸಿಇ 2009, ದಿನಾಂಕ: 09.05.2019 ರ ನಡವಳಿಯನ್ವಯ) | 200.00 |
| 20. | ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕ (CDC) ಸರ್ಕಾರದ ಸುತ್ತೋಲೆ ಸಂ:ಇಡಿ 33 ಯುಇಸಿ 2012 ದಿನಾಂಕ:07.08.2012) | 150/- ರಿಂದ 600/- ರೂ. ಗಳವರೆಗೆ |
| 21 | ಬಳಕೆ ಶುಲ್ಕ<br>1. ಬಿಎಸ್ಸಿ (ಕಂಪ್ಯೂಟರ್ ಸೈನ್ಸ್, ಮೈಕ್ರೋ ಬಯಾಲಜಿ, ಬಯೋಟೆಕ್ನಾಲಜಿ & ಇನ್‌ಫಾರ್ಮೇಷನ್ ಸೈನ್ಸ್)<br>2. ಬಿ.ಸಿ.ಎ (ಕಂಪ್ಯೂಟರ್ ಕೋರ್ ಸಬ್ಜೆಕ್ಟ್)<br>3. ಬಿ.ಎ, ಬಿ.ಕಾಂ ಮತ್ತು ಬಿ.ಬಿ.ಎಂ (ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್) | 3000.00<br>6000.00<br>1000.00 |
| 22. | ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಶುಲ್ಕಗಳು | ಆಯಾ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ |

ಷರತ್ತುಗಳು:

1. ಆಯಾಯ ಕಾಲೇಜುಗಳ ಅರೆ ಸರ್ಕಾರಿ ಬ್ಯಾಂಕ್ ಖಾತೆಗಳನ್ನು ಪ್ರಾಂಶುಪಾಲರು ಹಾಗೂ ಸೇವೆಯಲ್ಲಿ ಹಿರಿಯರಾದ ಮತ್ತೊಬ್ಬ ಉಪನ್ಯಾಸಕರ ಹೆಸರಿನಲ್ಲಿ ಜಂಟಿ ಖಾತೆಗಳನ್ನಾಗಿ ಪರಿವರ್ತಿಸಿಕೊಳ್ಳಲು ಸೂಚಿಸಲಾಗಿದೆ.
2. ಕಾಲೇಜು ಅಭಿವೃದ್ಧಿ ಶುಲ್ಕ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ದಿ ಸ್ಕೌಟ್ಸ್ ಅಂಡ್ ಗೈಡ್ಸ್ ರೋವರ್ ಮತ್ತು ರೇಂಜರ್ ಘಟಕ, ಭಾರತ ರೆಡ್ ಕ್ರಾಸ್ ಸಂಸ್ಥೆ ಶುಲ್ಕ, ಎನ್.ಎಸ್.ಎಸ್. ಶುಲ್ಕ ಮುಂತಾದವುಗಳ ಶುಲ್ಕ ಸಂಗ್ರಹ ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶಗಳಲ್ಲಿ ತಿಳಿಸಿರುವ ಮಾರ್ಗಸೂಚಿ ಹಾಗೂ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.
3. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯ ಮೊತ್ತವನ್ನು ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸದುಪಯೋಗಪಡಿಸಿಕೊಳ್ಳಲು ಸೂಚಿಸಲಾಗಿದೆ.
4. ಬಳಕೆ ಶುಲ್ಕಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ : ಇಡಿ 149 ಯುಎನ್ಇ 2010, ಬೆಂಗಳೂರು, ದಿನಾಂಕ : 24.01.2011 ರಂತೆ ಕ್ರಮವಹಿಸುವುದು.
5. ಎಲ್ಲಾ ಸರ್ಕಾರಿ *ಪ್ರಥಮ* ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆಯನ್ನು ಕಡ್ಡಾಯವಾಗಿ ನಡೆಸತಕ್ಕದ್ದು ಹಾಗೂ ತಪಾಸಣೆಯನ್ನು ನಡೆಸಿರುವ ಬಗ್ಗೆ ಇಲಾಖೆಗೆ ವರದಿಯನ್ನು ಕಳುಹಿಸತಕ್ಕದ್ದೆಂದು ಸೂಚಿಸಲಾಗಿದೆ.
6. ಸರ್ಕಾರದ ಆದೇಶ ಸಂಖ್ಯೆ : ಇಡಿ 192 ಯೋಯೋಕ 2007, ಬೆಂಗಳೂರು, ದಿನಾಂಕ : 26.06.2007 ರನ್ವಯ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಬೋದನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ ವಿನಾಯಿತಿಯನ್ನು ನೀಡಲಾಗಿದೆ.
7. ಚಿತ್ರಕಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕಗಳನ್ನು ರೂ.1000 ಕ್ಕೆ ಹಾಗೂ ಪ್ರವೇಶಾತಿ ಶುಲ್ಕಗಳನ್ನು ಈಗಿರುವ ಶುಲ್ಕ ರೂ.200ರ ಬದಲಾಗಿ ರೂ.500 ಗಳಿಗೆ ಹೆಚ್ಚಿಸುವಂತೆ ಸೂಚಿಸಲಾಗಿದೆ ಹಾಗೂ ಸದರಿ ಶುಲ್ಕಗಳನ್ನು ಆಯಾಯ ಕಾಲೇಜುಗಳು ನೇರವಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿಗೆ ಸಂದಾಯ ಮಾಡಲು ಸೂಚಿಸಲಾಗಿದೆ. (ಸರ್ಕಾರದ ಪತ್ರಸಂಖ್ಯೆ : ಇಡಿ 71 ಡಿಸಿಇ 2009, ದಿನಾಂಕ: 09.05.2019 ರ ನಡವಳಿಯನ್ವಯ)

8. ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಟಿ 2022, ದಿನಾಂಕ : 14.07.2022 ರನ್ವಯ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕವನ್ನು ಶೈಕ್ಷಣಿಕ ಅಭಿವೃದ್ಧಿಗಾಗಿ ಉಪಯೋಗಿಸಲು ಅನುಮತಿ ನೀಡಲಾಗಿದ್ದು, ಸದರಿ ಆದೇಶದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವುದು.

9. ಸರ್ಕಾರಿ ಪದವಿ ಕಾಲೇಜುಗಳಲ್ಲಿನ ಬಿ.ಎ., ಬಿ.ಕಾಂ., ಬಿ.ಬಿ.ಎ. ಬಿಎಸ್ಸಿ, ಬಿ.ಸಿ.ಎ, ಬಿ.ಎಸ್.ಡಬ್ಲ್ಯೂ ಹಾಗೂ ಇತರೆ ಸ್ನಾತಕ ಕೋರ್ಸುಗಳಿಗೆ ಹಾಗೂ ಕಾನೂನು ಮತ್ತು ಚಿತ್ರಕಲಾ ಕೋರ್ಸ್‌ಗಳಿಗೆ ಮೇಲಿನಂತೆ ಶುಲ್ಕಗಳನ್ನು ವಸೂಲಿ ಮಾಡಲು ಸೂಚಿಸಲಾಗಿದೆ.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ, ಕಾನೂನು ಮತ್ತು ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ – ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಶಿಕ್ಷಣ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾನ ಪ್ರತಿಷ್ಠಾನ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560 002.
5. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಆಯುಕ್ತರು, ಹಿಂದುಳಿದ ್ರಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.
7. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ.
8. Project Director, State Scholarship Portal, Centre for e-Governance DPAR (e-Governance), Gate 2, 1st Floor, Room #110, MS Building, Bengaluru-560001
9. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.೨೬, ರೆಡ್‌ಕ್ರಾಸ್, ಭವನ, ಒಂದನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-೫೬೦ ೦೦೧.
10. ರಾಜ್ಯ ಕಾರ್ಯದರ್ಶಿಗಳು, ದಿ ಭಾರತ್ ಸ್ಕೌಟ್ಸ್ &ಗೈಡ್ಸ್, ಕರ್ನಾಟಕ, ಶಾಂತಿ ಗೃಹ, ನಂ.೩೯, ಅರಮನೆ ರಸ್ತೆ, ಬೆಂಗಳೂರು-೫೬೦ ೦೦೧.
11. ಕಛೇರಿ ಪ್ರತಿ.

1

26 JUN 2007

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ:- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ
ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡುವ ಬಗ್ಗೆ.

ಓದಲಾಗಿದೆ:- ದಿನಾಂಕ:04 ನೇ ಏಪ್ರಿಲ್ 2007ರಂದು ಸನ್ಮಾನ್ಯ ಮುಖ್ಯಮಂತ್ರಿಯವರ
ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

<u>ಪ್ರಸ್ತಾವನೆ</u>:-

(1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:04 ನೇ ಏಪ್ರಿಲ್ 2007ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ಅಂಶ (8) ರಲ್ಲಿ "ಈಗಾಗಲೇ ಸರ್ಕಾರಿ ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2001 ನೇ ಸಾಲಿನಿಂದ ಪಾಠ ಶುಲ್ಕ ವಿನಾಯಿತಿ ಸರ್ಕಾರದ ಆದೇಶದ ಮೂಲಕ ನೀಡಲಾಗಿದೆ. ಅದರಂತೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2007–08ನೇ ಸಾಲಿನಿಂದ ಪಾಠ ಶುಲ್ಕ ವಿನಾಯಿತಿ ನೀಡಲು ಸರ್ಕಾರದ ಆದೇಶ ಹೊರಡಿಸಿ ಘಟನೋತ್ತರ ಮಂಜೂರಾತಿಯನ್ನು ಆರ್ಥಿಕ ಇಲಾಖೆಯಿಂದ ಪಡೆಯಲು ಸೂಚಿಸಲಾಯಿತು".

(2) ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಇಡಿ:192:ಯೋಯೋಕ 2007 ಬೆಂಗಳೂರು, ದಿನಾಂಕ: 26–06–2007</u>
<u>[ಇಡಿ: 102 :ಸ್ಟೀಮರ(ಯುಜಿಸಿ) 2007, ದಿನಾಂಕ:26–06–2007]</u>

(3) ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ <u>ವಿದ್ಯಾರ್ಥಿನಿಯರಿಗೆ</u> ನಿಗಧಿತ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕವನ್ನು 2007–08ನೇ ಸಾಲಿನಿಂದ ಅನ್ವಯವಾಗುವಂತೆ ಮನ್ನಾ ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರುರವರಿಗೆ ಅನುಮತಿ ನೀಡಲಾಗಿದೆ.

(4) ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ:558 ವೆಚ್ಚ–8:2007, ದಿನಾಂಕ:21.06.2007ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

[ಕೆ.ಶ್ರೀಕಂಠೇಶ್ವರ]
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಯೋಜನೆ)

ಮು.ತಿ.ನೆ.ಗಾ.

ಕಾಲೇಜು ಶಿಕ್ಷಣ ಆಯುಕ್ತರ
ಒಳ ಪತ್ರ
04/03/2011

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿರುವ ಬಳಕೆ ಶುಲ್ಕವನ್ನು ವಿನಾಯ್ತಿಗೊಳಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ. ಇಡಿ 131 ಯುಆರ್‌ಸಿ 2002, ದಿನಾಂಕ:10-12-2002.
2. ಸರ್ಕಾರಿ ಆದೇಶ ಸಂ. ಇಡಿ 316 ಯುಆರ್‌ಸಿ 2004, ದಿನಾಂಕ:13-09-2005.
3. ಸರ್ಕಾರಿ ಆದೇಶ ಸಂ. ಇಡಿ 192 ಯೋಯೋಕ 2007, ದಿನಾಂಕ:26-06-2007.
4. ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರ ಪತ್ರ ಸಂ. ಕಾಶಿಇ/ ಶೈವಿ/ ಶುಲ್ಕ/ 24/ 2005-06, ದಿನಾಂಕ:16-08-2010.

*****

ಪ್ರಸ್ತಾವನೆ:

1) ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್, ಮೈಕ್ರೋಬಯಾಲಜಿ, ಬಯೋಟೆಕ್ನಾಲಜಿ ಮತ್ತು ಮಾಹಿತಿ ತಂತ್ರಜ್ಞಾನ), ಬಿ.ಸಿ.ಎ (ಕಂಪ್ಯೂಟರ್ ಸೈನ್ಸ್ ಕೋರ್ ಸಬ್ಜೆಕ್ಟ್), ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ ವಿಷಯಗಳು ಇರುವ ಬಿ.ಎ., ಬಿ.ಕಾಂ., ಮತ್ತು ಬಿ.ಬಿ.ಎಂ. ಕೋರ್ಸುಗಳಿಗೆ ಅನುಕ್ರಮವಾಗಿ ವಾರ್ಷಿಕ ರೂ. 3,000/-, ರೂ. 6,000/- ಮತ್ತು 2000/-ಗಳನ್ನು ಬಳಕೆ ಶುಲ್ಕವಾಗಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲು ಆದೇಶಿಸಲಾಗಿರುತ್ತದೆ.

2) ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ, ಬಿ.ಎ., ಬಿ.ಕಾಂ., ಮತ್ತು ಬಿ.ಬಿ.ಎಂ. ಕೋರ್ಸುಗಳ ವಿದ್ಯಾರ್ಥಿಗಳಿಂದ ವಸೂಲಿ ಮಾಡುವ ಬಳಕೆ ಶುಲ್ಕವನ್ನು ರೂ. 2000/- ರಿಂದ ರೂ. 1000/-ಗಳಿಗೆ ಕಡಿಮೆಗೊಳಿಸಲಾಗಿರುತ್ತದೆ. ಆದರೆ, ಬಿ.ಎಸ್ಸಿ ಮತ್ತು ಬಿ.ಸಿ.ಎ. ಕೋರ್ಸುಗಳ ಶುಲ್ಕವನ್ನು ಕಡಿಮೆಗೊಳಿಸಿರುವುದಿಲ್ಲ.

3) ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರಿಗೆ ನಿಗಧಿಪಡಿಸಿದ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕವನ್ನು ಮನ್ನಾ ಮಾಡಲಾಗಿರುತ್ತದೆ.

4) ಮೇಲೆ ಓದಲಾದ (4)ರ ಪತ್ರದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ಬಿ.ಎ. ಬಿ.ಎಸ್ಸಿ, ಬಿ.ಕಾಂ ಮತ್ತು ಬಿ.ಸಿ.ಎ ಈ ಕೋರ್ಸುಗಳಿಗೆ ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿರುವ ಬಳಕೆ ಶುಲ್ಕದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಮಹಿಳಾ ವಿದ್ಯಾರ್ಥಿನಿಯರಿಗೆ ಹಾಗೂ ವಾರ್ಷಿಕ ವರಮಾನ ರೂ. 11000/-ಗಳ ಒಳಗಡೆ ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡುವಂತೆ ಕೋರಿದ್ದಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂ. ಇಡಿ 149 ಯುಎನ್‌ಇ 2010, ಬೆಂಗಳೂರು, ದಿನಾಂಕ: 24-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಿ.ಎ., ಬಿ.ಕಾಂ. ಬಿ.ಎಸ್ಸಿ ಮತ್ತು ಬಿ.ಸಿ.ಎ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1,

ಮಹಿಳಾ ವಿದ್ಯಾರ್ಥಿಗಳಿಗೆ ಹಾಗೂ ವಾರ್ಷಿಕ ವರಮಾನ ರೂ. 11000/-ಗಳ ಒಳಗಡೆ ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಳಕೆ ಶುಲ್ಕದಿಂದ ವಿನಾಯಿತಿ ನೀಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎಸ್. ಜಾವಾಲಿ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಪ್ರತಿ ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ೧560 001.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
7. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನ ಸೌಧ, ಬೆಂಗಳೂರು.
9. ಸಂಬಂಧಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಮುಖಾಂತರ)
10. ಹಿರಿಯ ನಿರ್ದೇಶಕರು, (ಮೌಲ್ಯಮಾಪನ ವಿಭಾಗ), ಯೋಜನಾ ಇಲಾಖೆ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು
13. ಉನ್ನತ ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿ ಹಾಗೂ ಶಾಖಾಧಿಕಾರಿಗಳಿಗೆ
14. ಸಂಯೋಜಕರು, ಇ-ಆಡಳಿತ ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ
ಆಪ್ತ ಶಾಖೆ.
118
ಸಂಖ್ಯೆ
ದಿನಾಂಕ 14/07/2022

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕವನ್ನು ಶೈಕ್ಷಣಿಕ ಅಭಿವೃದ್ಧಿಗಾಗಿ ಉಪಯೋಗಿಸಲು ಅನುಮತಿ ನೀಡುವ ಕುರಿತು.

ಓದಲಾಗಿದೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: DTE-PLAN0DVP1/5/2022-JD-DEPT TECH EDUCATION (E-700766).
2. ಸರ್ಕಾರದ ಆದೇಶ ಸಂಖ್ಯೆ: ಇಡಿ 171 ಟಿಪಿಇ 2000, ದಿನಾಂಕ 13.12.2002.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಟಿಪಿಇ 2005, ದಿನಾಂಕ 18.10.2005.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಟಿಪಿಇ 2012, ದಿನಾಂಕ: 29.05.2012.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್ 5 ಟಿಬಿಎಫ್ ಶಿಕ್ಷಕರ ದಿನಾಚರಣೆ/6/2015-16, ದಿನಾಂಕ: 05.06.2015.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಟಿಪಿಇ 2016, ದಿನಾಂಕ:21.06.2016.
7. ಸರ್ಕಾರದ ಪತ್ರ ಸಂಖ್ಯೆ: ಇಡಿ 101 ಟಿಪಿಇ 2018, ದಿನಾಂಕ 30.06.2018.
8. ತಾಂತ್ರಿಕ ಶಿಕ್ಷಣ ಇಲಾಖೆ ಸುತ್ತೋಲೆ ಸಂಖ್ಯೆ:ಡಿಟಿಇ 513 ಎಸಿಎಂ (2) 2017-18 (ಭಾ), ದಿನಾಂಕ :02.07.2018
9. ಸರ್ಕಾರದ ಆದೇಶ ಸಂಖ್ಯೆ: ಇಡಿ 28 ಟಿಇಸಿ 93, ದಿನಾಂಕ: 07.05.1993.
10. ಸರ್ಕಾರದ ಆದೇಶ ಸಂಖ್ಯೆ: ಇಡಿ 243 ಟಿಇಸಿ 2006 (ಭಾಗ), ದಿನಾಂಕ: 25.05.2007.
11. ಸರ್ಕಾರದ ಆದೇಶ ಸಂಖ್ಯೆ: ಇಡಿ 08 ಟಿಇಸಿ 2009, ದಿನಾಂಕ 28.05.2009.
12. ಸರ್ಕಾರದ ಆದೇಶ ಸಂಖ್ಯೆ: ಇಡಿ 223 ಟಿಇಸಿ 2021. ದಿನಾಂಕ 04.11.2021..
13. ಸರ್ಕಾರದ ಆದೇಶ ಸಂಖ್ಯೆ: ಇಡಿ 141 ಡಿಟಿಇ 2021, ದಿನಾಂಕ 04.12.2021.
14. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 22.12.2011
15. ಸರ್ಕಾರದ ಆದೇಶ ಸಂಖ್ಯೆ: ಇಡಿ 11 ವಿವಿಧ 2015, ದಿನಾಂಕ: 04.05.2015
16. ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/2015-16, ದಿನಾಂಕ: 21.05.2015.
17. ಸರ್ಕಾರದ ಆದೇಶ ಸಂಖ್ಯೆಇಡಿ 77 ಯುಇಸಿ 2017, ದಿನಾಂಕ:17.05.2017
18. ಸರ್ಕಾರದ ಆದೇಶ ಸಂಖ್ಯೆ: ಇಡಿ 71 ಡಿಸಿಇ 2009, ದಿನಾಂಕ: 09.05.2019
19. ಸರ್ಕಾರದ ಆದೇಶ ಸಂಖ್ಯೆ ಇಡಿ 131 ಡಿಸಿಇ 2022, ದಿನಾಂಕ:23.06.2022 -
20. ಸುತ್ತೋಲೆ ಸಂಖ್ಯೆ ಕಾಶಿಇ/ಶೈವಿ/06/ಪದವಿ ಶುಲ್ಕ/2022-23, ದಿನಾಂಕ: 23.06.2022.
21. ಸರ್ಕಾರದ ಆದೇಶ ಸಂಖ್ಯೆ ಇಡಿ 191 ಡಿಸಿಇ 1996, ದಿನಾಂಕ: 27.08.1996.
22. ಸರ್ಕಾರದ ಆದೇಶ ಸಂಖ್ಯೆ ಇಡಿ 33 ಯುಇಸಿ 2012, ದಿನಾಂಕ:07.08.2012.
23. ಸರ್ಕಾರದ ಆದೇಶ ಸಂಖ್ಯೆ: ಇಡಿ 188 ಯುಇಸಿ 2013, ದಿನಾಂಕ: 19.08.2013
24. ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಯುಇಸಿ 2001, ದಿನಾಂಕ:13.01.2003
25. ಸರ್ಕಾರದ ಆದೇಶ ಸಂಖ್ಯೆ: ಇಡಿ 53 ಯುಇಸಿ 2006, ದಿನಾಂಕ:15.03.2006
26. ಸುತ್ತೋಲೆ ಸಂಖ್ಯೆ ಕಾಶಿಇ/ಶೈವಿ/149/ಎಫ್ ಶುಲ್ಕ/2005-06, ದಿನಾಂಕ:06.04.2006.

ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರ
ಆಪ್ತಶಾಖೆ
ಕ್ರಮ ಸಂಖ್ಯೆ: 37
ದಿನಾಂಕ : 16/07/2022

27. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಸುತ್ತೋಲೆ ಸಂಖ್ಯೆ ಎಫ್5/ಟಿಬಿಎಫ್/ಶಿಕ್ಷಕರ ದಿನಾಚರಣೆ/06/2019-20, ದಿನಾಂಕ:12.06.2019.
28. ಸರ್ಕಾರದ ಆದೇಶ ಸಂಖ್ಯೆ: ಇಡಿ 46 ವಿವಿಧ 2010, ದಿನಾಂಕ: 23.11.2011
29. ಸುತ್ತೋಲೆ ಸಂಖ್ಯೆ ಕಾಶಿಇ/ಶೈವಿ/145/ ಪಠ್ಯೇತರ/2010-11, ದಿನಾಂಕ:15.01.2013
30. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 21.11.2011
31. ಸುತ್ತೋಲೆ ಸಂಖ್ಯೆಕಾಶಿಇ/ ಶೈವಿ /29 ಸದಸ್ಯತ್ವ /2008-09, ದಿನಾಂಕ:19.06.2012
32. ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಯುಆರ್‌ಸಿ 2002, ದಿನಾಂಕ:10.11.2002
33. ಸರ್ಕಾರದ ಆದೇಶ ಸಂಖ್ಯೆ: ಇಡಿ 316 ಯುಆರ್‌ಸಿ 2004, ದಿನಾಂಕ:13.09.2005
34. ಸರ್ಕಾರದ ಆದೇಶ ಸಂಖ್ಯೆ: ಇಡಿ 149 ಯುಎನ್‌ಇ 2010, ದಿನಾಂಕ:24.01.2011

<u>ಪ್ರಸ್ತಾವನೆ:-</u>

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ರಾಷ್ಟ್ರೀಯ ಶಿಕ್ಷಣ ನೀತಿ-2020ರಲ್ಲಿ ಎಲ್ಲಾ ಕಾಲೇಜುಗಳು ಸ್ವಯಂ ಸಮರ್ಥನೀಯವಾಗಿ ಬೆಳೆಯಲು ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 91 ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಒಟ್ಟು ಶುಲ್ಕದಲ್ಲಿ ಸರ್ಕಾರಿ ಶುಲ್ಕವನ್ನು ಆಯಾ ಕಾಲೇಜುಗಳಲ್ಲಿಯೇ ಉಳಿಸಿಕೊಂಡು ಸಂಬಂಧಪಟ್ಟ ಸಂಸ್ಥೆಗಳ ಅಭಿವೃದ್ಧಿಗಾಗಿ "ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ" ಇವರ ಅನುಮೋದನೆಯ ಪಡೆದ ನಂತರ ಬಳಸಿಕೊಳ್ಳಲು ಸರ್ಕಾರದ ಅನುಮತಿ ಕೋರಿರುತ್ತಾರೆ.

ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಪ್ರವೇಶಾತಿ ಸಮಯದಲ್ಲಿ ನಿಗಧಿತ ಶುಲ್ಕಗಳನ್ನು ಸಂಗ್ರಹಿಸಲಾಗುತ್ತಿದೆ. ಅದರಲ್ಲಿ ಸರ್ಕಾರಿ ಶುಲ್ಕಗಳನ್ನು ಸರ್ಕಾರಕ್ಕೆ ಜಮೆ ಮಾಡಲಾಗುತ್ತಿದೆ. ಸರ್ಕಾರದ ಆದೇಶ ಮತ್ತು ಸುತ್ತೋಲೆಗಳಲ್ಲಿ ವಿವಿಧ ಶುಲ್ಕಗಳನ್ನು ಕಾಲೇಜಿನ ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ಬಳಸಿಕೊಳ್ಳಲು ಮಾರ್ಗದರ್ಶನ/ಆದೇಶ ನೀಡಲಾಗಿರುತ್ತದೆ.

ವಿವಿಧ ಸರ್ಕಾರಿ ಆದೇಶಗಳಲ್ಲಿ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಸರ್ಕಾರಿ ಶುಲ್ಕಗಳಾದ ಪ್ರವೇಶ ಶುಲ್ಕ, ಬೋಧನಾ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ಜಮೆ ಮಾಡುವ ಮತ್ತು ಇತರೆ ಶುಲ್ಕಗಳಾದ ಕ್ರೀಡಾಶುಲ್ಕ, ಗುರುತಿನ ಚೀಟಿ, ಮ್ಯಾಗಜಿನ್, ಗ್ರಂಥಾಲಯ ಠೇವಣಿ, ಸಂಘ ಶುಲ್ಕ, ಪ್ರಯೋಗಾಲಯ ಶುಲ್ಕ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಕಲ್ಯಾಣ ನಿಧಿ ಹಾಗೂ ಎನ್ .ಎಸ್.ಎಸ್ ಶುಲ್ಕ ಸಂಗ್ರಹಿಸಿ ಪ್ರಾಂಶುಪಾಲರ ಹೆಸರಿನಲ್ಲಿರುವ ಬ್ಯಾಂಕಿನ ಉಳಿತಾಯ ಖಾತೆಗಳಿಗೆ ಜಮೆಮಾಡಿ ವೆಚ್ಚಮಾಡುವ ಬಗ್ಗೆ ಮಾರ್ಗದರ್ಶನ/ಆದೇಶ ನೀಡಲಾಗಿರುತ್ತದೆ.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯದ ಶುಲ್ಕಗಳನ್ನು ಹೊರತುಪಡಿಸಿ ಸರ್ಕಾರಿ ಶುಲ್ಕಗಳಾದ ಪ್ರವೇಶ ಶುಲ್ಕ ಮತ್ತು ಭೋದನಾ ಶುಲ್ಕ ಸಂಗ್ರಹಿಸಿ ಸರ್ಕಾರಕ್ಕೆ ಜಮೆ ಮಾಡುವ ಮತ್ತು ಇತರೆ ಶುಲ್ಕಗಳಾದ ಗುರುತಿನ ಚೀಟಿ, ವೈದ್ಯಕೀಯ ಶುಲ್ಕ, ಕೈಪಿಡಿ, ಕ್ರೀಡಾ ಶುಲ್ಕ, ಸಂಘ ಶುಲ್ಕ, ವಾಚನಾಲಯ, ಮ್ಯಾಗಝೈನ್, ಗ್ರಂಥಾಲಯ ಠೇವಣಿ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಕಲ್ಯಾಣ ನಿಧಿ ಹಾಗೂ ಎನ್.ಎಸ್.ಎಸ್ ಶುಲ್ಕ, ರೆಡ್ ಕ್ರಾಸ್ ಶುಲ್ಕ, ಮಹಿಳಾ ಘಟಕ, ಹಾಗೂ ಇತರೆ ಶುಲ್ಕವಾದ ರೂ:10,000/-ಗಳನ್ನು ಸಂಗ್ರಹಿಸಿ ಪ್ರಾಂಶುಪಾಲರ ಹೆಸರಿನಲ್ಲಿರುವ ಬ್ಯಾಂಕಿನ ಉಳಿತಾಯ ಖಾತೆಗಳಿಗೆ ಜಮೆಮಾಡಿ ವೆಚ್ಚಮಾಡುವ ಬಗ್ಗೆ ಮಾರ್ಗದರ್ಶನ/ಆದೇಶ ನೀಡಲಾಗಿರುತ್ತದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಸ್ತಾವನೆಯಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2022-23ನೇ ಸಾಲಿನಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳನ್ನು ಹಾಗೂ ಇತರೆ ಶುಲ್ಕಗಳನ್ನು ಆಯಾ ಸಂಸ್ಥೆಯಲ್ಲಿನ ಪ್ರಾಂಶುಪಾಲರ ಉಳಿತಾಯ ಖಾತೆಯಲ್ಲಿ ಉಳಿಸಿಕೊಂಡು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದೊಂದಿಗೆ ಸಂಸ್ಥೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲು ಪ್ರಸ್ತಾಪಿಸಲಾಗಿದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2022-23ನೇ ಸಾಲಿನಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳನ್ನು ಆಯಾ ಕಾಲೇಜುಗಳಲ್ಲಿ ಉಳಿಸಿಕೊಂಡು ಹಾಗೂ ಈಗಾಗಲೇ ಕಾಲೇಜು ಹಂತದಲ್ಲಿ ಬಳಸಿಕೊಳ್ಳಲಾಗುತ್ತಿರುವ ಸರ್ಕಾರಿ ಶುಲ್ಕಗಳನ್ನು ಒಳಗೊಂಡಂತೆ ಕಾಲೇಜುಗಳ ಅಭಿವೃದ್ಧಿಗಾಗಿ ವೆಚ್ಚಮಾಡಲು ಕ್ರೋಢೀಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಟಿ 2022,</u>
<u>ಬೆಂಗಳೂರು, ದಿನಾಂಕ: 14ನೇ ಜುಲೈ 2022.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳಿಂದ ಶುಲ್ಕಗಳನ್ನು ಸಂಗ್ರಹಿಸಲು ಹಾಗೂ ಸದರಿ ಶುಲ್ಕಗಳನ್ನು ಆಯಾ ಕಾಲೇಜುಗಳಲ್ಲಿಯೇ ಉಳಿಸಿಕೊಂಡು ಸಂಸ್ಥೆಗಳ ಅಭಿವೃದ್ಧಿಗಾಗಿ ಆಯುಕ್ತರು, ಕಾಲೇಜು

ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅನುಮೋದನೆಯೊಂದಿಗೆ ಈ ಕೆಳಕಂಡಂತೆ ವೆಚ್ಚಗೊಳಿಸಲು ಅನುಮತಿ ನೀಡಿ ಆದೇಶಿಸಿದೆ.

1. ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ:- (ಕೋಷ್ಟಕ-1)

<table>
<tr><th>ಕ್ರ. ಸಂ.</th><th>ಶುಲ್ಕದ ಹೆಸರು</th><th>ಶುಲ್ಕದ ಮೊತ್ತ (ರೂ.ಗಳಲ್ಲಿ)</th><th>ಶುಲ್ಕದ ಉದ್ದೇಶ</th></tr>
<tr><td>1</td><td>2</td><td>3</td><td>4</td></tr>
<tr><td colspan="4">1. ಸರ್ಕಾರಿ ಶುಲ್ಕಗಳು</td></tr>
<tr><td>I</td><td>ಅರ್ಜಿ ಶುಲ್ಕ</td><td>ಉಚಿತ</td><td>ಕಾಲೇಜಿನ ಮೂಲಭೂತ ಸೌಲಭ್ಯಗಳಾದ</td></tr>
<tr><td>II.</td><td>ಪ್ರವೇಶ ಶುಲ್ಕ</td><td>80</td><td rowspan="9">1. ಕಟ್ಟಡಗಳ ನಿರ್ವಹಣೆ / ದುರಸ್ತಿ,<br>2. ಗ್ರಂಥಾಲಯ ಪುಸ್ತಕ ಖರೀದಿ ಮತ್ತು ಗ್ರಂಥಾಲಯಕ್ಕೆ ಸಂಬಂಧಿಸಿದ ವೆಚ್ಚಗಳು.<br>3. ಪೀಠೋಪಕರಣಗಳ ಖರೀದಿ / ದುರಸ್ತಿ,<br>4. ಪ್ರಯೋಗಾಲಯಗಳ ಉಪಕರಣ/ ಕನ್ಸೂಮಬಲ್ಸ್ / ಕೆಮಿಕಲ್ಸ್ ಖರೀದಿಗಾಗಿ ಭರಿಸುವುದು.<br>5. ಇಂಟರ್‌ನೆಟ್ ಸೌಲಭ್ಯದ ವೆಚ್ಚಗಳು.<br>6. ಕಛೇರಿ ವೆಚ್ಚ (ಲೇಖನ ಸಾಮಗ್ರಿ, ಕಛೇರಿ ಉಪಕರಣಗಳು ಮತ್ತು ದುರಸ್ತಿ).</td></tr>
<tr><td>III.</td><td>ಬೋಧನಾ ಶುಲ್ಕ</td><td>940</td></tr>
<tr><td>IV.</td><td>ಪ್ರಯೋಗಾಲಯ ಶುಲ್ಕ</td><td>260</td></tr>
<tr><td>V.</td><td>ವೈದ್ಯಕೀಯ ತಪಾಸಣಾ ಶುಲ್ಕ</td><td>30</td></tr>
<tr><td>VI.</td><td>ವರ್ಗಾವಣೆ ಪತ್ರ ಶುಲ್ಕ</td><td>40</td></tr>
<tr><td>VII.</td><td>ವಿದ್ಯಾಭ್ಯಾಸ ಪ್ರಮಾಣ ಪತ್ರ ಶುಲ್ಕ</td><td>20</td></tr>
<tr><td>VIII.</td><td>ವಿದ್ಯಾಭ್ಯಾಸ ಪ್ರಮಾಣ ಪತ್ರ ಶುಲ್ಕ</td><td>100</td></tr>
<tr><td colspan="2">ಒಟ್ಟು ಶುಲ್ಕ</td><td>1470</td></tr>
<tr><td>2</td><td>ಸಿ.ಡಿ.ಎಫ್.</td><td>200</td></tr>
<tr><td>3</td><td>KSTBF (ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ)</td><td>25</td><td>ಸಂಗ್ರಹಿಸಿದ ಪೂರ್ಣ ಶುಲ್ಕಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಜಮಾಮಾಡುವುದು.</td></tr>
<tr><td>4</td><td>KSSWF (ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ)</td><td>25</td><td>1. ಸಂಗ್ರಹಿಸಿದ ಶುಲ್ಕಗಳಲ್ಲಿ ಶೇ.40 ಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಜಮೆಮಾಡುವುದು.<br>2. ಶೇ.60 ಶುಲ್ಕಗಳನ್ನು ಕಾಲೇಜಿನಲ್ಲಿಯೇ ಉಳಿಸಿಕೊಂಡು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೇ ವಿನಿಯೋಗಿಸಿಕೊಳ್ಳತಕ್ಕದ್ದು.ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಪರಿಗಣಿಸಬಹುದಾದ ಕಾರ್ಯಕ್ರಮಗಳ ವಿವರಗಳನ್ನುಪ್ರತ್ಯೇಕ ಆದೇಶದ ಮೂಲಕ ಹೊರಡಿಸಲಾಗುವುದು.<br>3. ಪ್ರಸ್ತುಕ ವರ್ಷದಲ್ಲಿ ವಿನಯೋಗಿಸಿಕೊಳ್ಳದಿದ್ದಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಜಮಾಮಾಡತಕ್ಕದ್ದು.</td></tr>
</table>

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| 5 | NWTF (ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿ) | 20 | ಸಂಗ್ರಹಿಸಿದ ಪೂರ್ಣ ಶುಲ್ಕಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಜಮಾ ಮಾಡುವುದು. |
| 6 | ಸ್ಕೌಟ್ಸ್ & ಗೈಡ್ಸ್ ರೇಂಜರ್ಸ್ /ರೋವರ್ಸ್ | 50 | ಘಟಕಗಳ ನೋಂದಣಿ ಶುಲ್ಕ, ಶಿಬಿರ, ಚಾರಣ ಸಂಬಂಧಿಸಿದ ವೆಚ್ಚಗಳು, ಸ್ಕೌಟಿಂಗ್ ಮತ್ತು ಗೈಡಿಂಗ್‌ಗೆ ಸಂಬಂಧಪಟ್ಟ ಪುಸ್ತಕಗಳು, ರೋವರ್/ರೇಂಜರ್ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣಭತ್ಯೆ ಹಾಗೂ ನೋಂದಣಿ ಶುಲ್ಕ, ಸಮವಸ್ತ್ರ ಖರೀದಿ, ತರಬೇತಿ ಸಾಮಾಗ್ರಿಗಳು ಮತ್ತು ಉಪಕರಣಗಳ ಖರೀದಿ. |
| 7 | ರೆಡ್‌ಕ್ರಾಸ್ ಶುಲ್ಕ | 50 | 1. ಶೇ.70ರ ಶುಲ್ಕದ ಮೊತ್ತವನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು.<br>2. ಶೇ.30ರ ಶುಲ್ಕದ ಮೊತ್ತವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಪಾವತಿಸುವುದು. |
| 8 | ರಾಷ್ಟ್ರೀಯ ಸೇವಾ ಯೋಜನೆ ಶುಲ್ಕ | ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜು-50. 00<br>ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜು-40. 00 | 1. ಎನ್.ಎಸ್.ಎಸ್. ಕೋಶ ಸ್ಥಾಪಿಸಿ ಎನ್.ಎಸ್.ಎಸ್.ನ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸುವುದು.<br>2. ಎನ್.ಎಸ್.ಎಸ್. ಕೋಶದಲ್ಲಿನ ಹಣವನ್ನು ಇನ್ನಾವುದೇ ಕಾರ್ಯಕ್ಕೆ ಬಳಸತಕ್ಕದ್ದಲ್ಲ. |
| 9 | ಬಳಕೆ ಶುಲ್ಕ | ಬಿ.ಎಸ್ಸಿ. (ಕಂಪ್ಯೂಟರ್ ಸೈನ್ಸ್, ಮೈಕ್ರೋ ಬಯಾಲಜಿ, ಬಯೋಟೆಕ್ನಾಲಜಿ & ಇನ್‌ಫಾರ್ಮೇಶನ್ ಸೈನ್ಸ್), - 3000<br>ಬಿ.ಸಿ.ಎ. (ಕಂಪ್ಯೂಟರ್ ಕೋರ್ ಸಬ್ಜೆಕ್ಟ್) - 6000.00<br>ಬಿ.ಎ., ಬಿ.ಕಾಂ. ಮತ್ತುಬಿ.ಬಿ.ಎಂ. (ಕಂಪ್ಯೂಟರ್ ಸೈನ್ಸ್) ಮತ್ತುಕಂಪ್ಯೂಟರ್ ಅಪ್ಲಿಕೇಷನ್) -1000.00 | ಕಾಲೇಜುಗಳಿಗೆ ಕಂಪ್ಯೂಟರ್, ಸಾಫ್ಟ್‌ವೇರ್, ಪ್ರಯೋಗಾಲಯದ ಉಪಕರಣ, ಪೀಠೋಪಕರಣ ಖರೀದಿ. |
| 10 | ವಾಚನಾಲಯ ಶುಲ್ಕ | 70 | ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪಠ್ಯ ಪುಸ್ತಕಗಳು, ನಿಯತಕಾಲಿಕೆಗಳು, ಇ-ಜರ್ನಲ್‌ಗಳು, ರಾಷ್ಟ್ರೀಯ ಮಟ್ಟದ ಎಜುಕೇಷನಲ್ ಜರ್ನಲ್‌ಗಳು, ನಿಘಂಟುಗಳು, |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| | | | ಇ-ಲೈಬ್ರರಿ (ಪುಸ್ತಕಗಳ ಗಣಕೀಕರಣ ಕಾರ್ಯ) ಬೈಂಡಿಂಗ್ಸ್ ಮತ್ತು ವಾಚನಾಲಯ/ ಗಂಥಾಲಯ ಸಂಬಂಧಿಸಿದಂತೆ ಮಾತ್ರ ಅಗತ್ಯವಿರುವ ಪೀಠೋಪಕರಣಗಳು, ಪುಸ್ತಕ ವಿತರಣಾ ಕೌಂಟರ್ಸ್, ಸಿಸಿ ಕ್ಯಾಮರಾಗಳು ಮತ್ತು ಇತರೆ ಅಗತ್ಯ ಪರಿಕರಗಳು ಹಾಗೂ ಇವುಗಳಿಗೆ ಸಂಬಂಧಿಸಿದ ದುರಸ್ತಿ ಕಾರ್ಯಗಳಿಗೆ ಬಳಸಿಕೊಳ್ಳುವುದು. |
| 11 | ಕ್ರೀಡಾ ಶುಲ್ಕ | 100.00 | ಕ್ರೀಡಾ ಉಪಕರಣ, ಕ್ರೀಡಾ ಸಾಮಾಗ್ರಿ, ಸಮವಸ್ತ್ರ ಖರೀದಿ, ಕ್ರೀಡಾಂಗಣ ದುರಸ್ತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿ /ದೈ.ಶಿ. ಬೋಧಕರುಗಳಿಗೆ ಪ್ರಯಾಣ ವೆಚ್ಚ ಪಾವತಿ, ಕ್ರೀಡಾ ಉತ್ಸವಗಳ ಆಯೋಜನೆ ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಸಾಧನೆ ತೋರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದು. |
| 12 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 200.00 | 1. ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳ ವೆಚ್ಚ.<br>2. ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ನೋಂದಣಿ ಶುಲ್ಕ ಹಾಗೂ ಪ್ರಯಾಣ ವೆಚ್ಚ ಪಾವತಿ.<br>3. ಕಾಲೇಜುಗಳಲ್ಲಿ ನಡೆಸುವ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ವೆಚ್ಚ. |
| 13 | ಕಾಲೇಜು ಮ್ಯಾಗಜಿನ್ ಶುಲ್ಕ | 100.00 | ಕಾಲೇಜಿನ ವಾರ್ಷಿಕ ಸಂಚಿಕೆಯ ಪ್ರಕಟಿಸಲು ತಗಲುವ ವೆಚ್ಚ. |
| 14 | ಪರಿಚಯ ಪುಸ್ತಕ | 50.00 | ಕಾಲೇಜಿನ ಪರಿಚಯ ಪುಸ್ತಕ ಪ್ರಕಟಿಸಲು ತಗಲುವ ವೆಚ್ಚ. |
| 15 | ಗುರುತಿನ ಚೀಟಿ ಶುಲ್ಕ. | 50.00 | ವಿದ್ಯಾರ್ಥಿಗಳ ಗುರುತಿನ ಚೀಟಿಯನ್ನು ಮುದ್ರಿಸಲು ತಗಲುವ ವೆಚ್ಚ. |

2. ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ;- (ಕೋಷ್ಟಕ-2)

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| 1 | 2 | 3 | 4 |
| 1. | ಸರ್ಕಾರಿ ಶುಲ್ಕ | | |
| I | ಪ್ರವೇಶ ಶುಲ್ಕ | 30 | 1. ಕಟ್ಟಡಗಳ ನಿರ್ವಹಣೆ / ದುರಸ್ತಿ, |
| II | ಬೋಧನಾ ಶುಲ್ಕ | 2940 | 2. ಗ್ರಂಥಾಲಯ ಪುಸ್ತಕ ಖರೀದಿ ಹಾಗೂ |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| III | ಅಭಿವೃದ್ಧಿ ಶುಲ್ಕ | 500 | ಗ್ರಂಥಾಲಯಕ್ಕೆ ಸಂಬಂಧಿಸಿದ ವೆಚ್ಚಗಳು<br>3. ಪೀಠೋಪಕರಣಗಳ ಖರೀದಿ / ದುರಸ್ತಿ,<br>4. ಪ್ರಯೋಗಾಲಯಗಳ ಉಪಕರಣ /ಕನ್ಸೂಮಬಲ್ಸ್ / ಕೆಮಿಕಲ್ಸ್ ಖರೀದಿಗಾಗಿ ಭರಿಸುವುದು.<br>5. ಇಂಟರ್ ನೆಟ್ ಸೌಲಭ್ಯ ಪಡೆಯುವ ವೆಚ್ಚ ಭರಿಸುವುದು<br>6. ಕಛೇರಿ ವೆಚ್ಚ(ಲೇಖನ ಸಾಮಗ್ರಿ, ಕಚೇರಿ ಉಪಕರಣಗಳ ಖರೀದಿ ಮತ್ತು ದುರಸ್ತಿ) |
| | ಒಟ್ಟು | 3470 | |
| I | ಕ್ರೀಡಾ ಶುಲ್ಕ | 70 | ಕ್ರೀಡಾ ಶುಲ್ಕಗಳನ್ನು ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸುವ ಕ್ರೋಢೀಕೃತವಾದ ಒಟ್ಟು ಹಣದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.10ರಂತೆ ಕ್ರೀಡಾ ನಿಧಿಯನ್ನು ತೆಗೆದು ಈ ಕ್ರೋಢಿಕೃತ ಮೊತ್ತವನ್ನು ಪಾಲಿಟೆಕ್ನಿಕ್ ಸ್ಪೋರ್ಟ್ಸ್ ಕಮಿಟಿ, ಬೆಂಗಳೂರು ಇವರ ಹೆಸರಿಗೆ ಬೇಡಿಕೆ ಹುಂಡಿ ಪಡೆದು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪ್ರತಿ ವರ್ಷ ನವೆಂಬರ್ ಒಳಗಾಗಿ ಕಳುಹಿಸತಕ್ಕದ್ದು ಉಳಿದ ಮೊತ್ತವನ್ನು ಕ್ರೀಡಾ ಸಾಮಗ್ರಿಗಳಿಗೆ ಕ್ರೀಡೆಗಳು ಮತ್ತು ಪಂದ್ಯಾವಳಿಗಳನ್ನು ನಡೆಸಲು ಹಾಗೂ ಇತರ ವೆಚ್ಚಗಳನ್ನು ಭರಿಸುವುದು |
| II | ಗುರುತಿನ ಚೀಟಿ | 10 | ವಿದ್ಯಾರ್ಥಿಗಳ ಗುರುತಿನ ಚೀಟಿಯನ್ನು ಅಚ್ಚುಮಾಡಿಸಿ ನಿಯಾಮಾನುಸಾರ ವಿತರಿಸಲು ಬಳಸುವುದು |
| III | ಮ್ಯಾಗಜೈನ್ ಶುಲ್ಕ | 60 | ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಮ್ಯಾಗಜೈನ್ ಹೊರತರಲು ಬಳಸುವುದು |
| IV | ಗ್ರಂಥಾಲಯ ಠೇವಣಿ | 150 | ಅಂತಿಮ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಕೋರ್ಸ್ ಮುಗಿದ ಕೂಡಲೇ ನಿಯಾಮಾನುಸಾರ ಹಿಂತಿರುಗಿಸುವುದು. ಗ್ರಂಥಾಲಯ ಠೇವಣಿಯನ್ನು ನಿಗಧಿತ ಅವಧಿಯೊಳಗೆ ವಿದ್ಯಾರ್ಥಿಗಳು ಪಡೆಯದೇ ಇದ್ದಲ್ಲಿ ಅಂತಹ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗ್ರಂಥಾಲಯದ ಅಭಿವೃದ್ಧಿಗೆ ಉಪಯೋಗಿಸಬಹುದಾಗಿದೆ. |
| V | ಸಂಘ ಶುಲ್ಕ | 60 | ವಿದ್ಯಾರ್ಥಿ ಸಂಘದ ಚಟುವಟಿಕೆಗಳಿಗಾಗಿ ವಿದ್ಯಾರ್ಥಿ ಸಂಘದ ಸಭೆಯಲ್ಲಿ ಅನುಮೋದನೆ ಪಡೆದು ಉಪಯೋಗಿಸಬಹುದು |
| VI | ವಾಚನಾಲಯ ಶುಲ್ಕ | 100 | ವಾಚನಾಲಯ ಶುಲ್ಕವನ್ನು ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸಿ ಕ್ರೂಡೀಕೃತವಾದ ಒಟ್ಟು ಹಣವನ್ನು ದಿನಪತ್ರಿಕೆ ಮತ್ತು ನಿಯತಕಾಲಿಕೆ, ತಾಂತ್ರಿಕ ನಿಯತಕಾಲಿಕೆಗಳನ್ನು ಗ್ರಂಥಾಲಯಕ್ಕೆ, ಪುಸ್ತಕ, ಕಂಪ್ಯೂಟರ್ ಬಿಡಿಭಾಗ, ಗ್ರಂಥಾಲಯಕ್ಕೆ ಪೀಠೋಪಕರಣ ಗ್ರಂಥಾಲಯ ಪುಸ್ತಕಗಳನ್ನು ಬೈಂಡಿಂಗ್ ಮಾಡಿಸಲು ಬಳಸುವುದು. |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| VII | ಪ್ರಯೋಗಾಲಯ ಶುಲ್ಕ | 300 | ಪ್ರಯೋಗಾಲಯ ಶುಲ್ಕವನ್ನು ಕ್ರೋಢೀಕೃತವಾದ ಒಟ್ಟು ಹಣದಲ್ಲಿ ಪ್ರಯೋಗಾಲಯ ಉಪಕರಣಗಳನ್ನು ಸುಸ್ಥಿತಿಯಲ್ಲಿಡಲು, ಖರೀದಿಸಲು ಮತ್ತು ಪ್ರಯೋಗಾಲಯ ಅಭಿವೃದ್ಧಿಗಾಗಿ ಉಪಯೋಗಿಸುವುದು. ಈ ಹಣವನ್ನು ಉಪಯೋಗಿಸುವ ಮೊದಲು ನಿಯಮಾನುಸಾರ ನಿರ್ದೇಶಕರ ಪೂರ್ವಾನುಮತಿ ಪಡೆದು ಕ್ರಮ ತೆಗೆದುಕೊಳ್ಳುವುದು. |
| VIII | ವಿದ್ಯಾರ್ಥಿ ಕ್ಷೇಮಾಭಿವೃದಿ ನಿಧಿ | 25 | ಪ್ರತಿ ಪಾಲಿಟೆಕ್ನಿಕ್‌ನಲ್ಲಿ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರತಿವರ್ಷ ಸಂಗ್ರಹಿಸುವ ಹಣದಲ್ಲಿ ಶೇ.50 ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಕಡ್ಡಾಯವಾಗಿ ಆಯಾ ಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಕಳುಹಿಸಿ ಕೊಡಬೇಕು.<br>ಪಾಲಿಟೆಕ್ನಿಕ್‌ನಲ್ಲಿ ಉಳಿಸಿಕೊಂಡ ಶೇ.50ರಷ್ಟು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಹಣವನ್ನು ಪ್ರಾಚಾರ್ಯರು ಉಪನ್ಯಾಸಕರ ಸಭೆ ಕರೆದು ಪ್ರಥಮ, ದ್ವಿತೀಯಾ ಮತ್ತು ತೃತೀಯಾ ವಿದ್ಯಾರ್ಥಿಗಳಿಗೆ ಕೋರ್ಸುವಾರು ಕನಿಷ್ಠ ಒಂದು ಬಹುಮಾನ ಬರುವಂತೆ ಪುಸ್ತಕ ರೂಪದಲ್ಲಿ ವಿತರಿಸುವುದು. ಪಾಲಿಟೆಕ್ನಿಕ್‌ನಲ್ಲಿ ವಿದ್ಯಾರ್ಥಿನಿಯರು ಇದ್ದಲ್ಲಿ ಕನಿಷ್ಠ ಇಬ್ಬರು ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆಯಾಗುವಂತೆ ನೋಡಿಕೊಳ್ಳುವುದು. ಬಹುಮಾನಗಳನ್ನು ನೀಡುವಾಗ ವಿದ್ಯಾರ್ಥಿಗಳ ಅರ್ಹತೆಯನ್ನು ಹಾಗೂ ಹಾಜರಾತಿ, ನಡತೆ ಶೈಕ್ಷಣಿಕ ಪ್ರಗತಿ (ಹಿಂದಿನ ವರ್ಷದಲ್ಲಿ ಗಳಿಸಿರುವ ಅಂಕಗಳು) ಮತ್ತು ಆರ್ಥಿಕ ಹಿಂದುಳಿಯುವಿಕೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಸೂಚಿಸಲಾಗಿದೆ. ಯಾವುದೇ ರೀತಿಯ ಧನ ಸಹಾಯ ಪಡೆಯುವ ವಿದ್ಯಾರ್ಥಿಗಳಿಗೆ ಈ ಹಣವನ್ನು ವಿತರಿಸಬಾರದೆಂದು ತಿಳಿಸಲಾಗಿದೆ. ಬಹುಮಾನ ನೀಡುವ ಕ್ರಿಯೆಯನ್ನು ಪ್ರತಿ ಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಮುಗಿಸಬೇಕು. ಕ್ರಮಕೈಗೊಂಡ ಬಗ್ಗೆ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸತಕ್ಕದ್ದು. |
| IX | ಶಿಕ್ಷಕರ ಕಲ್ಯಾಣ ನಿಧಿ | 25 | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಸಂಗ್ರಹಿಸುವ ಹಣವನ್ನು ಕ್ರೋಢಿಕರಿಸಿ ಆಯಾ ಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಪೂರ್ಣವಾಗಿ ಕ್ರ.ಸಂ.(8)ರಲ್ಲಿ ನಮೂದಿಸಿರುವ ವಿಳಾಸಕ್ಕೆ ಕಳುಹಿಸಬೇಕು. ಯಾವುದೇ ಕಾರಣಕ್ಕೆ ಈ ಹಣವನ್ನು ಪಾಲಿಟೆಕ್ನಿಕ್‌ನಲ್ಲಿ ಉಳಿಸಿಕೊಳ್ಳಬಾರದು. ಈ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಸೂಕ್ತಕ್ರಮ ತೆಗೆದು ಕೊಳ್ಳಲಾಗುವುದು. |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| | ಒಟ್ಟು | 800 ((800+30 (ಪ್ರವೇಶ ಶುಲ್ಕ)= 830) | |
| X | ರಾಷ್ಟ್ರೀಯ ಸೇವಾ ಯೋಜನಾ ಘಟಕ (NSS) ಶುಲ್ಕ | i. ರೂ. 40/-ಒಂದು NSS ಘಟಕ ಇರುವ ಸಂಸ್ಥೆಗಳಲ್ಲಿ<br>ii. ರೂ. 50/-NSS ಘಟಕ ಇಲ್ಲದಿರುವ ಸಂಸ್ಥೆಗಳಲ್ಲಿ | ಪ್ರತಿ ವರ್ಷದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸುವುದು. |
| XI | ಭಾರತೀಯ ಯುವ ರೆಡ್ ಕ್ರಾಸ್ ಘಟಕ ಶುಲ್ಕ | ರೂ. 50/- | ಭಾರತೀಯ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರತಿಸಂಸ್ಥೆಯಲ್ಲಿ ಪ್ರಾರಂಭಿಸಲು ಅಗತ್ಯ ಕ್ರಮವಹಿಸಲು ಹಾಗೂ ಪ್ರತಿ ವಿದ್ಯಾರ್ಥಿಯಿಂದ ಪ್ರತಿವರ್ಷ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕವನ್ನು ಸಂಗ್ರಹಿಸಿ ಸದರಿ ಶುಲ್ಕದಲ್ಲಿ ಶೇಕಡ 70ರಷ್ಟನ್ನು ಸಂಸ್ಥೆಯ ಘಟಕದಲ್ಲಿಯೇ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಹಾಗೂ ಉಳಿದ ಶೇಕಡ 30ರಷ್ಟನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಖಾತೆ, ಬೆಂಗಳೂರು ಇಲ್ಲಿಗೆ ಕಳುಹಿಸುವುದು. |

3. ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ:- (ಕೋಷ್ಟಕ-3)

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| 1 | 2 | 3 | 5 |
| 1. ಸರ್ಕಾರಿ ಶುಲ್ಕ | | | |
| I | ಪ್ರವೇಶ ಶುಲ್ಕ | 100 | 1. ಕಟ್ಟಡಗಳ ನಿರ್ವಹಣೆ / ದುರಸ್ತಿ,<br>2. ಗ್ರಂಥಾಲಯ ಪುಸ್ತಕ ಖರೀದಿ ಹಾಗೂ ಗ್ರಂಥಾಲಯಕ್ಕೆ ಸಂಬಂಧಿಸಿದ ವೆಚ್ಚಗಳು<br>3. ಪೀಠೋಪಕರಣಗಳ ಖರೀದಿ / ದುರಸ್ತಿ,<br>4. ಪ್ರಯೋಗಾಲಯಗಳ ಉಪಕರಣ / ಕನ್ಸೂಮಬಲ್ಸ್ / ಕೆಮಿಕಲ್‌ಸ್‌ಖರೀದಿಗಾಗಿ ಭರಿಸುವುದು.<br>5. ಇಂಟರ್ ನೆಟ್ ಸೌಲಭ್ಯ ಪಡೆಯವ ವೆಚ್ಚ ಭರಿಸುವುದು<br>6. ಕಛೇರಿ ವೆಚ್ಚ( ಲೇಖನ ಸಾಮಗ್ರಿ, ಕಚೇರಿ ಉಪಕರಣಗಳ ಖರೀದಿ ಮತ್ತು ದುರಸ್ತಿ) |
| II | ಬೋಧನಾ ಶುಲ್ಕ | 15000 | |
| III | ಇತರ ಶುಲ್ಕ | 10000 | |
| | ಒಟ್ಟು | 25100 | |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| I | ಕ್ರೀಡಾಶುಲ್ಕ | 50 | ಕ್ರೀಡಾ ಸಾಮಗ್ರಿಗಳಿಗೆ ಕ್ರೀಡೆಗಳು ಮತ್ತು ಪಂದ್ಯಾವಳಿಗಳನ್ನು ನಡೆಸಲು ಹಾಗೂ ಇತರೆ ವೆಚ್ಚಗಳನ್ನು ಭರಿಸಲು |
| II | ಗುರುತಿನ ಚೀಟಿ | 20 | ವಿದ್ಯಾರ್ಥಿಗಳ ಗುರುತಿನ ಚೀಟಿಯನ್ನು ಅಚ್ಚು ಮಾಡಿಸಿ ನಿಯಾಮಾನುಸಾರ ವಿತರಿಸಲು ಬಳಸುವುದು |
| III | ಮ್ಯಾಗಜಿನ್ ಶುಲ್ಕ | 25 | ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಮ್ಯಾಗಜಿನ್ ಹೊರತರಲು ಬಳಸುವುದು |
| IV | ಗ್ರಂಥಾಲಯ ಠೇವಣಿ | 250 | ಅಂತಿಮ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಕೋರ್ಸ್ ಮುಗಿದ ಕೂಡಲೇ ನಿಯಾಮಾನುಸಾರ ಹಿಂತಿರುಗಿಸುವುದು. ಗ್ರಂಥಾಲಯ ಠೇವಣಿಯನ್ನು ನಿಗಧಿತ ಅವಧಿಯೊಳಗೆ ವಿದ್ಯಾರ್ಥಿಗಳು ಪಡೆಯದೇ ಇದ್ದಲ್ಲಿ ಅಂತಹ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗ್ರಂಥಾಲಯದ ಅಭಿವೃದ್ಧಿಗೆ ಉಪಯೋಗಿಸ ಬಹುದಾಗಿದೆ. |
| V | ಸಂಘ ಶುಲ್ಕ | 50 | ವಿದ್ಯಾರ್ಥಿ ಸಂಘದ ಚಟುವಟಿಕೆಗಳಿಗಾಗಿ ವಿದ್ಯಾರ್ಥಿ ಸಂಘದ ಸಭೆಯಲ್ಲಿ ಅನುಮೋದನೆ ಪಡೆದು ಉಪಯೋಗಿಸಬಹುದು |
| VI | ವಾಚನಾಲಯ ಶುಲ್ಕ | 25 | ವಾಚನಾಲಯ ಶುಲ್ಕವನ್ನು ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸಿ ಕ್ರೂಡೀಕೃತವಾದ ಒಟ್ಟು ಹಣವನ್ನು ದಿನಪತ್ರಿಕೆ ಮತ್ತು ನಿಯತಕಾಲಿಕೆ, ತಾಂತ್ರಿಕ ನಿಯತಕಾಲಿಕೆಗಳನ್ನು ಗ್ರಂಥಾಲಯಕ್ಕೆ ಪುಸ್ತಕ, ಕಂಪ್ಯೂಟರ್ ಬಿಡಿಭಾಗ, ಗ್ರಂಥಾಲಯಕ್ಕೆ ಪೀಠೋಪಕರಣ ಗ್ರಂಥಾಲಯ ಪುಸ್ತಕಗಳನ್ನು ಬೈಂಡಿಂಗ್ ಮಾಡಿಸಲು |
| VII | ವೈದ್ಯಕೀಯ ಶುಲ್ಕ | 20 | ವಿದ್ಯಾರ್ಥಿಗಳ ವೈದ್ಯಕೀಯ ವೆಚ್ಚಗಳಿಗೆ ಬಳಸಿಕೊಳ್ಳುವುದು |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| VIII | ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ | 25 | ಪ್ರತಿ ಸಂಸ್ಥೆ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರತಿವರ್ಷ ಸಂಗ್ರಹಿಸುವ ಹಣದಲ್ಲಿ ಶೇ.50 ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಕಡ್ಡಾಯವಾಗಿ ಆಯಾಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಕಳುಹಿಸಿಕೊಡಬೇಕು.<br>ಸಂಸ್ಥೆಯಲ್ಲಿ ಉಳಿಸಿಕೊಂಡ ಶೇ.50 ರಷ್ಟು ಹಣವನ್ನು ಪ್ರಾಚಾರ್ಯರು ಉಪನ್ಯಾಸಕರ ಸಭೆ ಕರೆದು ಪ್ರಥಮ, ಎರಡನೇ, ಮೂರನೇ ಮತ್ತು ನಾಲ್ಕನೇ ವರ್ಷದ ವಿದ್ಯಾರ್ಥಿಗಳಿಗೆ ಕೋರ್ಸುವಾರು ಕನಿಷ್ಠ ಒಂದು ಬಹುಮಾನ ಬರುವಂತೆ ಪುಸ್ತಕ ರೂಪದಲ್ಲಿ ವಿತರಿಸುವುದು. ಸಂಸ್ಥೆಯಲ್ಲಿ ವಿದ್ಯಾರ್ಥಿನಿಯರು ಇದ್ದಲ್ಲಿ ಕನಿಷ್ಟ ಇಬ್ಬರು ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆಯಾಗುವಂತೆ ನೋಡಿಕೊಳ್ಳುವುದು.<br>ಬಹುಮಾನಗಳನ್ನು ನೀಡುವಾಗ ವಿದ್ಯಾರ್ಥಿಗಳ ಅರ್ಹತೆಯನ್ನು ಹಾಗೂ ಹಾಜರಾತಿ, ನಡತೆ ಶೈಕ್ಷಣಿಕ ಪ್ರಗತಿ (ಹಿಂದಿನ ವರ್ಷದಲ್ಲಿ ಗಳಿಸಿರುವ ಅಂಕಗಳು) ಮತ್ತು ಆರ್ಥಿಕ ಹಿಂದುಳಿಯುವಿಕೆಯನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಸೂಚಿಸಲಾಗಿದೆ. ಯಾವುದೇ ರೀತಿಯ ಧನ ಸಹಾಯ ಪಡೆಯುವ ವಿದ್ಯಾರ್ಥಿಗಳಿಗೆ ಈ ಹಣವನ್ನು ವಿತರಿಸಬಾರದೆಂದು ತಿಳಿಸಲಾಗಿದೆ. ಬಹುಮಾನ ನೀಡುವ ಕ್ರಿಯೆಯನ್ನು ಪ್ರತಿ ಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಮುಗಿಸಬೇಕು. ಕ್ರಮಕೈಗೊಂಡ ಬಗ್ಗೆ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸತಕ್ಕದ್ದು. |
| IX | ಶಿಕ್ಷಕರ ಕಲ್ಯಾಣ ನಿಧಿ | 25 | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಸಂಗ್ರಹಿಸುವ ಹಣವನ್ನು ಕ್ರೋಢಿಕರಿಸಿ ಆಯಾ ಶೈಕ್ಷಣಿಕ ವರ್ಷದ ಅಕ್ಟೋಬರ್ 15ರ ಒಳಗಾಗಿ ಪೂರ್ಣವಾಗಿ ಕ್ರ.ಸಂ.(8) ರಲ್ಲಿ ನಮೂದಿಸಿರುವ ವಿಳಾಸಕ್ಕೆ ಕಳುಹಿಸಬೇಕು. ಯಾವುದೇ ಕಾರಣಕ್ಕೆ ಈ ಹಣವನ್ನು ಸಂಸ್ಥೆಯಲ್ಲಿ ಉಳಿಸಿಕೊಳ್ಳಬಾರದು. ಈ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. |

| ಕ್ರ. ಸಂ. | ಶುಲ್ಕದ ಹೆಸರು | ಶುಲ್ಕದ ಮೊತ್ತ (ಚಾಲ್ತಿಯಲ್ಲಿರುವ) (ರೂ.ಗಳಲ್ಲಿ) | ಶುಲ್ಕದ ಉದ್ದೇಶ |
|---|---|---|---|
| ಒಟ್ಟು | | 490 | |
| ಸರ್ಕಾರಿ ಶುಲ್ಕ+ಇತರೆ ಶುಲ್ಕ | | 25590 | |
| X | ರಾಷ್ಟ್ರೀಯ ಸೇವಾ ಯೋಜನಾ ಘಟಕ (NSS) ಶುಲ್ಕ | i. ರೂ. 40/-ಒಂದು NSS ಘಟಕ ಇರುವ ಸಂಸ್ಥೆಗಳಲ್ಲಿ<br>ii. ರೂ. 50/- NSS ಘಟಕ ಇಲ್ಲದಿರುವ ಸಂಸ್ಥೆಗಳಲ್ಲಿ | ಪ್ರತಿ ವರ್ಷದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸುವುದು. |
| XI | ಭಾರತೀಯ ಯುವ ರೆಡ್ ಕ್ರಾಸ್ ಘಟಕ ಶುಲ್ಕ | ರೂ. 50/- | ಭಾರತೀಯ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರತಿ ಸಂಸ್ಥೆಯಲ್ಲಿ ಪ್ರಾರಂಭಿಸಲು ಅಗತ್ಯ ಕ್ರಮವಹಿಸಲು ಹಾಗೂ ಪ್ರತಿ ವಿದ್ಯಾರ್ಥಿಯಿಂದ ಪ್ರತಿ ವರ್ಷ ಪ್ರವೇಶಾತಿ ಸಂದರ್ಭದಲ್ಲಿ ಶುಲ್ಕವನ್ನು ಸಂಗ್ರಹಿಸಿ ಸದರಿ ಶುಲ್ಕದಲ್ಲಿ ಶೇಕಡ 70ರಷ್ಟನ್ನು ಸಂಸ್ಥೆಯ ಘಟಕದಲ್ಲಿಯೇ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಹಾಗೂ ಉಳಿದ ಶೇಕಡ 30ರಷ್ಟನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಖಾತೆ, ಬೆಂಗಳೂರು ಇಲ್ಲಿಗೆ ಕಳುಹಿಸುವುದು |

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಎಲ್ಲಾ ಶುಲ್ಕಗಳನ್ನು ಕೋಷ್ಟಕ-1ರಲ್ಲಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆ (Annual Institutional Development Plan) ಸಿದ್ಧಪಡಿಸಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ಪ್ರತಿ ವರ್ಷದ ಜೂನ್ ಮಾಹೆಯಲ್ಲಿ ಪ್ರಾಂಶುಪಾಲರು ರಚಿಸುವುದು ಹಾಗೂ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಆಗಸ್ಟ್ ಅಂತ್ಯದೊಳಗೆ ಆಯುಕ್ತಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

| | |
|---|---|
| ಪ್ರಾಂಶುಪಾಲರು | ಅಧ್ಯಕ್ಷರು |
| ಐ.ಕ್ಯೂ.ಎ.ಸಿ. ಸಂಚಾಲಕರು | ಸದಸ್ಯ ಕಾರ್ಯದರ್ಶಿ |
| ನಿಕಾಯವಾರು(ಕಲಾ, ವಾಣಿಜ್ಯ, ನಿರ್ವಹಣಾ, ವಿಜ್ಞಾನ ಮತ್ತು ಭಾಷೆ) ಹಿರಿಯ ಉಪನ್ಯಾಸಕರು (ಜ್ಯೇಷ್ಠತೆ ಆಧಾರದ ಮೇರೆಗೆ ಪ್ರತಿ ವರ್ಷ ಸರದಿ ಮೇರೆಗೆ ಬದಲಾಯಿಸುವುದು) | ಸದಸ್ಯರು |
| ಮ್ಯಾನೇಜರ್ / ಅಧೀಕ್ಷಕರು | ಸದಸ್ಯರು |
| ಸದರಿ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಪ್ರತಿನಿಧಿಗಳು (ಎರಡು ವಿದ್ಯಾರ್ಥಿ ಮತ್ತು ಎರಡು ವಿದ್ಯಾರ್ಥಿನಿ-ಪ್ರತಿ ವರ್ಷ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು) | ಸದಸ್ಯರು |

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪರಿಶೀಲನೆಗಾಗಿ ಆಯುಕ್ತಾಲಯದಲ್ಲಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಸೆಪ್ಟೆಂಬರ್ ಮಾಹೆಯ 15ನೇ ತಾರೀಖಿನೊಳಗೆ ಪರಿಶೀಲಿಸಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅನುಮೋದನೆಗೆ ಸಲ್ಲಿಸುವುದು ಹಾಗೂ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಯೋಜನೆಗೆ ಸೆಪ್ಟೆಂಬರ್ ಮಾಹೆಯಲ್ಲಿ ಅನುಮೋದನೆ ನೀಡುವುದು.

| | |
|---|---|
| ನಿರ್ದೇಶಕರು | ಅಧ್ಯಕ್ಷರು |
| ಹೆಚ್ಚುವರಿ ನಿರ್ದೇಶಕರು | ಸದಸ್ಯರು |
| ಮುಖ್ಯ ಆಡಳಿತಾಧಿಕಾರಿಗಳು | ಸದಸ್ಯರು |
| ಜಂಟಿ ನಿರ್ದೇಶಕರು (ಶೈಕ್ಷಣಿಕ) | ಸದಸ್ಯ ಕಾರ್ಯದರ್ಶಿ |
| ಸಂಬಂಧಪಟ್ಟ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕರು | ಸದಸ್ಯರು |
| ಲೆಕ್ಕಾಧಿಕಾರಿಗಳು (ಕೇಂದ್ರ ಕಛೇರಿ) | ಸದಸ್ಯರು |

ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ಸಂಗ್ರಹಿಸಲಾಗುವ ಎಲ್ಲಾ ಶುಲ್ಕಗಳನ್ನು ಕ್ರಮವಾಗಿ ಕೋಷ್ಟಕ-2&3ರಲ್ಲಿ ಸೂಚಿಸಿರುವ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆ (Annual Institutional Development Plan) ಸಿದ್ಧಪಡಿಸಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ಪ್ರತಿವರ್ಷದ ಜೂನ್ ಮಾಹೆಯಲ್ಲಿ ಪ್ರಾಂಶುಪಾಲರು ರಚಿಸುವುದು ಹಾಗೂ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಆಗಸ್ಟ್ ಅಂತ್ಯದೊಳಗೆ ಆಯುಕ್ತಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

| | |
|---|---|
| ಪ್ರಾಂಶುಪಾಲರು | ಅಧ್ಯಕ್ಷರು |
| I.Q.A.C. ಸಂಚಾಲಕರು | ಸದಸ್ಯ ಕಾರ್ಯದರ್ಶಿ |
| ಪ್ರತಿ ವಿಭಾಗದ ಹಿರಿಯ ಉಪನ್ಯಾಸಕರು (ಜೇಷ್ಠತೆ ಆಧಾರದ ಮೇರೆಗೆ ಪ್ರತಿ ವರ್ಷ ಸರದಿ ಮೇರೆಗೆ) | ಸದಸ್ಯರು |
| ಸಹಾಯಕ ಆಡಳಿತಾಧಿಕಾರಿ/ರಿಜಿಸ್ಟ್ರಾರ್ | ಸದಸ್ಯರು |
| ಸದರಿ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಪ್ರತಿನಿಧಿಗಳು (ಎರಡು ವಿದ್ಯಾರ್ಥಿ ಮತ್ತು ಎರಡು ವಿದ್ಯಾರ್ಥಿನಿ-ಪ್ರತಿ ವರ್ಷ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು) | ಸದಸ್ಯರು |

ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಿಂದ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪರಿಶೀಲನೆಗಾಗಿ ಆಯುಕ್ತಾಲಯದಲ್ಲಿ ಆಯುಕ್ತರು ಕಾಲೇಜು

ಮತ್ತು ತಾಂತ್ರಿಕ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯು ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಸೆಪ್ಟೆಂಬರ್ ಮಾಹೆಯ 15ನೇ ತಾರೀಖಿನೊಳಗೆ ಪರಿಶೀಲಿಸಿ ಆಯುಕ್ತರ ಅನುಮೋದನೆಗೆ ಸಲ್ಲಿಸುವುದು ಹಾಗೂ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಯೋಜನೆಗೆ ಸೆಪ್ಟೆಂಬರ್ ಮಾಹೆಯಲ್ಲಿ ಅನುಮೋದನೆ ನೀಡುವುದು.

| | |
|---|---|
| ನಿರ್ದೇಶಕರು | ಅಧ್ಯಕ್ಷರು |
| ಜಂಟಿ ನಿರ್ದೇಶಕರು(ಆಡಳಿತ) | ಸದಸ್ಯಕಾರ್ಯದರ್ಶಿ |
| ಜಂಟಿ ನಿರ್ದೇಶಕರು (ಸಿಡಿಸಿ) | ಸದಸ್ಯರು |
| ಉಪ ನಿರ್ದೇಶಕರು (ಯೋಜನೆ) | ಸದಸ್ಯರು |
| ಲೆಕ್ಕಾಧಿಕಾರಿಗಳು | ಸದಸ್ಯರು |

ಷರತ್ತುಗಳು;-

1. ಪ್ರತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಪ್ರತಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು/ಪ್ರತಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಜಾರಿಯಲ್ಲಿರುವ ಹಾಗೂ ವಿದ್ಯಾರ್ಥಿಗಳಿಂದ ಭರಿಸಲಾಗುತ್ತಿರುವ ಎಲ್ಲಾ ವಿಧದ ಶುಲ್ಕಗಳ ವಿವರಗಳನ್ನು ಸೂಚನಾ ಫಲಕದಲ್ಲಿ ಹಾಗೂ ಕಾಲೇಜಿನ ಜಾಲತಾಣದಲ್ಲಿ (Website) ಪ್ರತಿ ವರ್ಷ ಪ್ರಾಂಶುಪಾಲರು ಪ್ರಕಟಿಸತಕ್ಕದ್ದು.
2. ಸರ್ಕಾರದ ಆದೇಶ/ಸುತ್ತೋಲೆಗಳಲ್ಲಿನ ಮಾರ್ಗಸೂಚಿಗಳಂತೆ ಮತ್ತು ಯಾವ ಉದ್ದೇಶಗಳಿಗಾಗಿ ಸಂಗ್ರಹಿಸಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸಿಕೊಳ್ಳಲು ಪ್ರಾಂಶುಪಾಲರ ಹೆಸರಿನಲ್ಲಿ ಈಗಾಗಲೇ ತೆರೆದಿರುವ ಪ್ರತ್ಯೇಕ ಖಾತೆಗಳನ್ನು ಮುಂದುವರೆಸುವುದು ಹಾಗೂ ಸರ್ಕಾರಿ ಶುಲ್ಕಗಳನ್ನು (ಪ್ರವೇಶ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ವೈದ್ಯಕೀಯ ತಪಾಸಣಾ ಶುಲ್ಕ, ವರ್ಗಾವಣೆ ಪತ್ರ ಶುಲ್ಕ, ವಿದ್ಯಾಭ್ಯಾಸ ಪ್ರಮಾಣ ಪತ್ರ ಶುಲ್ಕ, ಗ್ರಂಥಾಲಯ ಶುಲ್ಕ) ಪ್ರಾಂಶುಪಾಲರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆ ತೆರೆದು ಜಮೆ ಮಾಡುವುದು.
3. ಶುಲ್ಕಗಳನ್ನು ಯಾವ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆಯೋ ಅದನ್ನು ಹೊರತುಪಡಿಸಿ ಇತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಬೇಕಾದಲ್ಲಿ ಹಾಗೂ ಅನುಮೋದಿತ ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಲ್ಲಿ ಬದಲಾವಣೆಗಳು ಬೇಕಾದಲ್ಲಿ ಆಯುಕ್ತರಿಂದ ಅನುಮೋದನೆ ಪಡೆಯುವುದು, ಪ್ರತಿ ಕಾಲೇಜಿನ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ರವರಿಂದ ಈ ರೀತಿ ಅನುಮೋದಿತವಾಗಿರುವ ಸಾಂಸ್ಥಿಕ ಅಭಿವೃದ್ಧಿ ಯೋಜನೆಯನ್ನು ಕಾಲೇಜುವಾರು ಆಯುಕ್ತಾಲಯದ ಜಾಲತಾಣದಲ್ಲಿ ಪ್ರಚಾರಪಡಿಸುವುದು.
4. ಅನುಮೋದಿತ ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಲ್ಲಿ ಯಾವುದೇ ಸಾಮಗ್ರಿಗಳ ಖರೀದಿಗಳು ಮಾಡಬೇಕಾದಲ್ಲಿ ಅದರ ಉಪಯೋಗ್ಯತೆ ಬಗ್ಗೆ ಪರಿಶೀಲಿಸಿ ಹಾಗೂ ವಿದ್ಯಾರ್ಥಿಗಳ ಹಿತಾಸಕ್ತಿಯಲ್ಲಿ ಅವಶ್ಯಕವಿದ್ದಲ್ಲಿ ಮಾತ್ರ ನಿಯಮಾನುಸಾರ ಖರೀದಿಸುವುದು. ಪ್ರತಿಯೊಂದು ಸಾಮಗ್ರಿಗಳ ವಿವರಗಳು ಸಂಬಂಧಪಟ್ಟ ದಾಸ್ತಾನು ವಹಿಯಲ್ಲಿ ನಮೂದಿಸತಕ್ಕದ್ದು. ಇದು ಪ್ರಾಂಶುಪಾಲರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
5. ಎಲ್ಲಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಅನುದಾನ ಮತ್ತು ಯೋಜನೆಗಳ ಪುನರಾವರ್ತನೆ ಆಗದೆ ವೆಚ್ಚಗಳನ್ನು ಭರಿಸಲು ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
6. ಎಲ್ಲಾ ವೆಚ್ಚಗಳನ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ.ನಿಯಮಗಳನ್ವಯ ಹಾಗೂ ಪ್ರಚಲಿತ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಭರಿಸುವುದು.

7. ಕಾಲೇಜಿನ ಸಮಿತಿಯು ಪ್ರತಿ ತಿಂಗಳು ಸಭೆ ಸೇರತಕ್ಕದ್ದು. ಸದರಿ ಸಮಿತಿಯು ವಾರ್ಷಿಕ ಹಾಗೂ ಐದು ವರ್ಷಗಳ ಯೋಜನೆಯನ್ನು ಸಿದ್ದಪಡಿಸಿ, ಅನುಮೋದನೆ ಪಡೆದು ಕಾರ್ಯಗತಗೊಳಿಸುವುದು.
8. ಕಾಲೇಜಿನ ವೆಬ್‌ಸೈಟ್ ನಲ್ಲಿ ಎಲ್ಲ ಉಳಿತಾಯ ಖಾತೆಗಳ ವಿವರ, ಪ್ರತಿ ತಿಂಗಳು ಖಾತೆಗಳ ಸ್ಕ್ಯಾನ್ ಮಾಡಲಾಗಿರುವ ಬ್ಯಾಂಕ್ ಸ್ಟೇಟ್‌ಮೆಂಟ್, ತಿಂಗಳಲ್ಲಿ ಸಾಧಿಸಿರುವ ಕ್ರಿಯಾ ಯೋಜನೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ , ಕಾಲೇಜಿನ ಸಮಿತಿಯು ಪ್ರತಿ ತಿಂಗಳು ನಡೆಸಿರುವ ಸಭೆಯ ನಡವಳಿ ಮತ್ತು ಖರ್ಚು-ವೆಚ್ಚಗಳ ವಿವರಗಳನ್ನು ಪ್ರಕಟಿಸತಕ್ಕದ್ದು.
9. ಇದಕ್ಕೆ ಸಂಬಂಧಿಸಿದ ಎಲ್ಲ ವ್ಯವಹರಣೆಗಳು ನಿಯಮಾನುಸಾರ online ತಂತ್ರಾಂಶದ ಮೂಲಕ ಇರತಕ್ಕದ್ದು;
10. ವಿವಿಧ ಪ್ರಕ್ರಿಯೆಗಳಿಗೆ ನಿಗಧಿಪಡಿಸಲಾಗಿರುವ ಕಾಲಮಿತಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 165 ವೆಚ್ಚ-8/2022, ದಿನಾಂಕ: 23.06.2022ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,
14/7/2022
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ರವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
6. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ನಿರ್ದೇಶಕರು, ಪಿ.ಎಂ.ಐ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
8. ಅಪರ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
10. ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಶಿವಮೊಗ್ಗ/ಮಂಗಳೂರು/ಕಲಬುರಗಿ/ಧಾರವಾಡ ವಿಭಾಗ.
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು,
12. ಸರ್ಕಾರದ ಜಂಟಿ ಕಾರ್ಯದರ್ಶಿ, ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿ, ಕಾಲೇಜು ಶಿಕ್ಷಣ, ಉನ್ನತ ಶಿಕ್ಷಣ ಇಲಾಖೆ,
14. ಸಂಬಂಧಪಟ್ಟ ಕಾಲೇಜುಗಳ ಮುಖ್ಯಸ್ಥರಿಗೆ (ಆಯುಕ್ತರ ಮೂಲಕ)
15. ವಿಶೇಷಾಧಿಕಾರಿ, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ (ಅಂತರ್ಜಾಲದಲ್ಲಿ ಪ್ರಕಟಿಸಲು)
16. ಶಾಖಾ ರಕ್ಷಾ ಪ್ರತಿ/ಹೆಚ್ಚುವರಿ ಪ್ರತಿಗಳು.